# ಹೊಸತು

## ಚರ್ಮ ಕಾಳಜಿಗೆ ‘ಕೊಕ’

ಚಳಿಗಾಲದ ಗಾಳಿಗೆ ಒರಟಾಗುವ ಚರ್ಮವನ್ನು ಹದಗೊಳಿಸಲೊಂದು ಕ್ರೀಮ್. ಚರ್ಮಕ್ಕೆ ನುಣುಪಾದ ಕಾಂತಿಯನ್ನು ಹೊರಹೊಮ್ಮಿಸಲು ‘ಕೊಕ ಬಟರ್’ ಕ್ರೀಮ್ ಉತ್ಪಾದಿಸಲಾಗಿದೆ ಎಂದು ಆಯುರ್ವೇದ ಸೌಂದರ್ಯವರ್ಧಕ ಉತ್ಪಾದಕ ಸಂಸ್ಥೆ ಅಸ್ಟಬೆರ್ರಿ ಬಯೋಸೈನ್ಸ್ ಕಂಪೆನಿ ಹೇಳಿದೆ.

ವಿಟಮಿನ್ ಇ ಹಾಗೂ ಚರ್ಮವನ್ನು ಒಣಗದಂತೆ ಪೋಷಿಸುವ ಎಣ್ಣೆಯುಕ್ತ ಕ್ರೀಮ್ ಬಳಸುವುದರಿಂದ ಚರ್ಮದ ಒರಟುತನವನ್ನು ಹೋಗಲಾಡಿಸಬಹುದು ಎಂದು ಕಂಪೆನಿ ಹೇಳಿಕೊಂಡಿದೆ. 100ಗ್ರಾಂನ ಪ್ಯಾಕ್‌ಗೆ 60 ರೂಪಾಯಿ.







## ವನೆಸಾದಿಂದ ಡಿಯೊಡರೆಂಟ್

ಡಿಯೊಡರೆಂಟ್ ತಯಾರಿಸುವಲ್ಲಿ ಮುಂಚೂಣಿಯಲ್ಲಿರುವ ‘ವನೆಸಾ’ ಹುಡುಗಿಯರಿಗಾಗಿ ಸುಗಂಧಭರಿತ ಡಿಯೊಡರೆಂಟ್ ತಯಾರಿಸಿದೆ. ಯುವತಿಯರನ್ನು ದೃಷ್ಟಿಯಲ್ಲಿ ಇಟ್ಟುಕೊಂಡು ಅವರಿಗೆ ಇಷ್ಟಗವಾಗುವಂತೆ ಸಿದ್ಧಪಡಿಸಿರುವುದಾಗಿ ಕಂಪೆನಿ ಹೇಳಿಕೊಂಡಿದೆ.

ಉಲ್ಲಾಸದ ಅನುಭವವನ್ನು ಇದು ನೀಡುತ್ತದೆ ಎನ್ನುವ ಕಂಪೆನಿ ಐದು ಬಗೆಯ ಸುಗಂಧ ಬೀರುವ ಐದು ವರ್ಣದಲ್ಲಿ ಮಾರುಕಟ್ಟೆಗೆ ತಂದಿದೆ. ಆಲ್ಕೋಹಾಲ್ ರಹಿತ ಡಿಯೋಡರೆಂಟ್ ದಿನವಿಡೀ ತಾಜಾತನದ ಅನುಭವ ನೀಡುತ್ತದೆ ಎನ್ನಲಾಗಿದೆ. 150 ಎಂ.ಎಲ್ ಬಾಟಲ್‌ಗೆ ರೂ.150.




## ಫಿಲಿಪ್ಸ್‌ನ ಗೋಪ್ಯೂರ್ ಕಾಂಪಾಕ್ಟ್ 110

ವಾಯುಮಾಲಿನ್ಯದಿಂದ ಉಂಟಾಗುವ ಆರೋಗ್ಯ ಸಮಸ್ಯೆ ತಡೆಗೆ ಫಿಲಿಪ್ಸ್ ಗೋಪ್ಯೂರ್ ಕಾಂಪಾಕ್ಟ್ 110 ಹೊಸ ಸಾಧನವನ್ನು ಬಿಡುಗಡೆ ಮಾಡಿದೆ. ಕಾರಿಗೆ ಸೂಕ್ತವಾಗುವ ಈ ಸಾಧನ ಕಾರಿನಲ್ಲಿ ಪ್ರಯಾಣಿಸುವವರಿಗೆ ವಾಯುಮಾಲಿನ್ಯದಿಂದ ಮುಕ್ತಿಗೊಳಿಸುವ ಉದ್ದೇಶ ಇದೆ ಎಂದು ಕಂಪೆನಿ ಹೇಳಿದೆ.

ಮೂರು ಪದರಗಳಲ್ಲಿ ಗಾಳಿಯನ್ನು ಶುದ್ಧಗೊಳಿಸುವ ತಂತ್ರಜ್ಞಾನವನ್ನು ಈ ಸಾಧನದಲ್ಲಿ ಅಳವಡಿಸಲಾಗಿದೆ. ಕೇವಲ 15 ನಿಮಿಷದಲ್ಲಿ ಶುದ್ಧಗಾಳಿಯ ಸುಖವನ್ನು ಅನುಭವಿಸಬಹುದು. ಸಿಗರೇಟ್‌ನ ಹೊಗೆ, ದೂಳು, ಗಾಳಿಯಲ್ಲಿರುವ ವೈರಾಣುಗಳನ್ನು ನಿಯಂತ್ರಿಸುತ್ತದೆ. ರಾಸಾಯನಿಕದಿಂದ ಕೂಡಿದ ಕಲುಷಿತ ವಾಯುವಿನಿಂದ ಉಂಟಾಗಬಹುದಾದ ಎಲ್ಲಾ ರೀತಿಯ ತೊಂದರೆಗೆ ಮುಕ್ತಿ ಹೇಳಬಹುದು ಎನ್ನುವುದು ಇದರ ಮಹತ್ವಾಕಾಂಕ್ಷೆ ಎಂದು ಕಂಪೆನಿ ಹೇಳಿಕೊಂಡಿದೆ.

ಈ ಸಾಧನವು 7999 ರೂಪಾಯಿಗೆ ಸಿಗಲಿದೆ. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: **www.philips.com**

## ಹೊಸ ವರ್ಷಕ್ಕೆ ಫ್ಯಾಬ್ ಧರಿಸಿ



ಶಾಪಿಂಗ್ ಮಾಡಲು ಬಯಸುವ ಯುವತಿಯರಿಗಾಗಿ ‘ಫ್ಯಾಬ್‌ಅಲೀ’ ಹೊಸ ವರ್ಷದ ಅವಕಾಶವನ್ನು ಕಲ್ಪಿಸಿದೆ. ಫ್ಯಾಬ್‌ಅಲೀಯಲ್ಲಿ ಹೊಸವರ್ಷದ ಸಂಭ್ರಮಕ್ಕೆ ಪರಿಪೂರ್ಣ ದಿರಿಸನ್ನು ತಂದಿದೆ. ಮ್ಯಾಕ್ಸಿ ಮತ್ತು ಲೇಸ್ ಡ್ರೆಸ್‌ಗಳಿಂದ ಸಕ್ವಿನ್ ಬಾಡಿಕಾನ್ ಎಲ್ಲವನ್ನೂ ಪಡೆಯಬಹುದು.

ಲೇಸ್ ಲವ್ ಡ್ರೆಸ್-ವೈಟ್, ಡ್ಯಾನ್ಸಿಂಗ್ ಸಕ್ವಿನ್ಸ್ ಬಾಡಿಕಾನ್ ಡ್ರೆಸ್-ಗೋಲ್ಡ್, ಪಾರ್ಟಿ ಆನ್ ಸಕ್ವಿನ್ ಡ್ರೆಸ್-ಬ್ಲಾಕ್, ಎಲಿಗೆಂಟ್ ಪೆಪ್ಲಂ ಮ್ಯಾಕ್ಸಿ ಡ್ರೆಸ್-ವೈಟ್, ಕ್ಲಾಸ್ ಅಪ್ ಲೇಸ್ ಮ್ಯಾಕ್ಸಿ ಡ್ರೆಸ್-ರೆಡ್ ಹೆಸರಿನ ಉಡುಗೆಯನ್ನು ತಂದಿದೆ. ಬೆಲೆ ರೂ.1700ನಿಂದ ಆರಂಭ.

ವಿವರಗಳಿಗೆ: 09880068347

## ತಾನಿಷ್ಕ್ ವಜ್ರಾಭರಣ

ತಾನಿಷ್ಕ್‌ನಿಂದ ಚಿನ್ನ ಹಾಗೂ ವಜ್ರದ ಆಭರಣ ಮೆಹೆಕ್ ಸಂಗ್ರಹ ಬಿಡುಗಡೆಯಾಗಿದೆ. ಚಿನ್ನಾಭರಣ ಉದ್ಯಮದ ಬ್ರಾಂಡ್ ಎನಿಸಿರುವ ತಾನಿಷ್ಕ್, ಹೊಳೆಯುವ ಹೊಸ ಬಗೆಯ ಮೆಹೆಕ್‌ಅನ್ನು ಪರಿಚಯಿಸಿದೆ. ಡ್ಯುಯೆಲ್ ಟೋನ್ಡ್ ಚಿನ್ನ ಮತ್ತು ಹೂವಿನ ಮಾದರಿಯಲ್ಲಿ ವಜ್ರದ ವಿನ್ಯಾಸಗೊಳಿಸಿದೆ. ಕಿವಿಯೋಲೆ, ಉಂಗುರ ಮತ್ತು ಪದಕಗಳನ್ನು ಈ ಸಂಗ್ರಹದಿಂದ ಪಡೆಯಬಹುದು. 18ಕ್ಯಾರೆಟ್ ಚಿನ್ನ ಮತ್ತು ಹೊಳೆಯುವ ವಜ್ರದಿಂದ ಕೆತ್ತನೆ ಮಾಡಲಾಗಿದೆ. ಪ್ರತಿ ವಿನ್ಯಾಸ ಗುಲಾಬಿ, ಪ್ಲುಮೆರಿಯ, ಡೇರೆ, ಸ್ಪಾನಿಷ್, ರೋಸ್ ಮತ್ತು ಪೆರಿವಿಂಕಲ್ ಮೊದಲಾದ ಹೂವಿನ ದಳದಿಂದ ಸ್ಫೂರ್ತಿ ಪಡೆದಿದೆ. ಹೆಸರಿಗೆ ತಕ್ಕಂತೆ ಪ್ರತಿ ಸಂಗ್ರಹ ಹೂವಿನ ಅಂದವನ್ನು ಸೆರೆ ಹಿಡಿದಿದೆ. ದರ 18,000 ರೂ.ನಿಂದ ಆರಂಭ.

